ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.
ಸಿ.ಸಿ.1212/2023

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಹಂತೇಶ್ ಗುರಿಕಾರ . | ಪಿ.ಡಬ್ಲ್ಯೂ.4 |
| ತಂದೆಯ ಹೆಸರು | : | ಶಿವಪುತ್ರಪ್ಪ | ಸಿ.ಡಬ್ಲ್ಯೂ.7 |
| ವಯಸ್ಸು | : | 30 ವರ್ಷ | |
| ವೃತ್ತಿ | : | ಪಿ.ಸಿ.ನಂ.267, ಬಣಕಲ್ ಪೊಲೀಸ್ ಠಾಣೆ | |
| ವಾಸ | : | ಬಣಕಲ್ | |

ದಿನಾಂಕಃ 14-07-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-

ನಾನು 2017 ರಿಂದ ಆಗಸ್ಟ್ 2024 ರವರೆಗೆ ನಗರ ಪೊಲೀಸ್ ಠಾಣೆಯಲ್ಲಿ ಪಿ.ಸಿ.ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ25.11.2021 ರಂದು ಚಾಸಾ-9 ರವರೊಂದಿಗೆ ಘಟನಾ ಸ್ಥಳಕ್ಕೆ ಹೋಗಿ ಇಲಾಖೆಯಿಂದ ನೀಡಿದ ಸೋನಿ ಕ್ಯಾಮೆರಾದಲ್ಲಿ ಸ್ಥಳ ಮಹಜರ್ ನ ಫೋಟೋವನ್ನು ತೆಗೆದಿರುತ್ತೇನೆ. ನಂತರ ಠಾಣಾ ಕಂಪ್ಯೂಟರ್ ನಿಂದ ತೆಗೆದ ಫೋಟೋವನ್ನು ಸಿ.ಡಿ.ಗೆ ವರ್ಗಾಯಿಸಿರುತ್ತೇನೆ. ಸದರಿ ಫೋಟೋವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿರುತ್ತದೆ. ಸಿ.ಡಿ.ಯನ್ನು ನೋಡುತ್ತಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಸಿ.ಡಿ.ಯ ಜೊತೆಗೆ ನನ್ನ ಪ್ರಮಾಣ ಪತ್ರವನ್ನು ನೀಡಿದ್ದು ಅದನ್ನು ನಿಪಿ-4(ಎ) ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-4(ಬಿ) ಇರುತ್ತದೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ-</u>

ಸೋನಿ ಕ್ಯಾಮೆರಾದ ಮಾಡೆಲ್ ನಂಬರ್ ಹಾಗೂ ಸೀರಿಯಲ್ ನಂಬರ್ ಹೇಳಲು ನನಗೆ ಆಗುವುದಿಲ್ಲ. ಕಂಪ್ಯೂಟರ್ ತರಬೇತಿ ಪಡೆದುಕೊಂಡ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಿ.ಕೆ.ಎಂ.3 ಕಂಪ್ಯೂಟರ್ ನಿಂದ ಫೋಟೋಗಳನ್ನು ನಾನು ಸಿ.ಡಿ.ಗೆ ಬರ್ನ್ ಮಾಡಿರುತ್ತೇನೆ. ನಾನು ಸ್ಥಳದಲ್ಲಿ ಫೋಟೋವನ್ನು ತೆಗೆದು ಅದನ್ನು ಕಂಪ್ಯೂಟರ್ ನಿಂದ ಸಿ.ಡಿ.ಗೆ ಬರ್ನ್ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ